ಶ್ರೀ ಎಂ. ಚಂದ್ರಶೇಖರಿರ್.—ಮಾನ್ಯ ಸದಸ್ಯರು ಸಪ್ಲಿಮೆಂಟರಿ ಕೇಳುವುದು ಯಾವ ಯಾವ ಪ್ರದೇಶದಲ್ಲಿ ಸೇಂದಿ ಅಂಗಡಿಗಳನ್ನು ತೆರೆಯುವುದಕ್ಕೆ ಪರವಾನೆಯನ್ನು ಕೊಡಲಾಗಿದೆ ಈರೀತಿ ಪರವಾನೆಯನ್ನು ಕೊಡುವುದಕ್ಕೆ ನಿಯಮಗಳು ಇಲ್ಲವೆ? ಎಂದು.

ಶ್ರೀ ಆರ್ ಗುಂಡೂರಾವ್.—ಮಾನ್ಯ ಸದಸ್ಯರು ಎಲ್ಲೆಲ್ಲಿ ಸಾರಾಯಿ ಅಂಗಡಿಗಳು ಇವೆಯೆಂದು ಕೇಳಿದ್ದರೆ ನಾವು ಇಂತಿಂಥ ಕಡೆ ಇವೆಯೆಂದು ಹೇಳುತ್ತಿದ್ದೆವು.

ಶ್ರೀ ಪಂಪಾಪತಿ.—ಸೇಂದಿ ಅಂಗಡಿಯಲ್ಲಿ ಮಾರಾಟ ಮಾಡತಕ್ಕ ಸೇಂದಿ ನಿಜವಾಗಿಯೂ ಮರದಿಂದ ಇಳಿಸಿರತಕ್ಕದ್ದೇ ಅಥವಾ ಪೆಡಿಸಿನ್ ಮಿಕ್ಸ್ ಮಾಡಿರತಕ್ಕದ್ದೇ? ಮಿಕ್ಸ್ ಮಾಡಿ ಮಾರಾಟ ಮಾಡುವುದಕ್ಕೆ ತಾವು ಪರವಾನೆಯನ್ನು ಕೊಟ್ಟಿದ್ದೀರಾ?

ಶ್ರೀ ಆರ್. ಗುಂಡೂರಾವ್.—ಅವನ್ನು ಯಾವ ರೀತಿಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ. ಮಾಮೂಲು ಯಾವರೀತಿಯಲ್ಲಿ ಸೇಂದಿಯನ್ನು ಮಾರಾಟ ಮಾಡುತ್ತಾರೋ ಅದೇ ರೀತಿಯಲ್ಲಿ ಈಗಲೂ ಕೊಡಲಾಗಿದೆ.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯ ಮಂತ್ರಿಗಳು ಸೇಂದಿ ಅಂಗಡಿಗಳವರು ಮಾರಾಟ ಮಾಡತಕ್ಕ ಸೇಂದಿ ನಿಜವಾಗಿಯೂ ಯಾವ ಸೇಂದಿ ಎನ್ನುವುದನ್ನು ತಿಳಿದುಕೊಳ್ಳಬೇಕು? ಮತ್ತು ಇಡೀ ರಾಜ್ಯದಲ್ಲಿ ಕಲಬೆರಕೆ ಸೇಂದಿಯನ್ನು ಮಾರಾಟ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕೆ ಸರ್ಕಾರವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಆರ್. ಗುಂಡೂರಾವ್.—ಈ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ. ಇಂಥ ಕಡೆ ಕಲಬೆರಕೆ ಸೇಂದಿಯನ್ನು ಮಾರುತ್ತಿದ್ದಾರೆಂದು ನಮಗೆ ದೂರು ಬಂದರೆ ಆಗ ನಾವು ಸಂಬಂಧಪಟ್ಟವರನ್ನು ಕಳುಹಿಸಿ ವಿಚಾರ ಮಾಡಿಸುತ್ತೇವೆ.

ಶ್ರೀ ಎಸ್. ಷಫಿ ಅಹಮದ್.—ತುಮಕೂರಿನಲ್ಲಿ ಕಾಲೇಜುಗಳ ಪಕ್ಕದಲ್ಲಿ ಹರಿಜನರ ಕಾಲೋನಿಯ ಪಕ್ಕದಲ್ಲಿ ಸೇಂದಿಯ ಅಂಗಡಿಗಳಿಗೆ ಪರವಾನೆಯನ್ನು ಕೊಟ್ಟಿದ್ದಾರೆ ಇವಕ್ಕೆ ಕಾನೂನು ಪ್ರಕಾರ ಅವಕಾಶ ವಿಲ್ಲ. ಕ್ರಮತೆಗೆದುಕೊಳ್ಳುವಿರಾ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಕಾನೂನು ಪ್ರಕಾರ ವಿಚಾರ ಮಾಡಿಸುತ್ತೇನೆ.

Revised Scales of Pay

431 SRI KADIDAL DIVAKAR (Thirthahalli)—Will the Minister for Finance and Planning be pleased to state:—

(a) the total number of the Government Servants working in Government Departments or the local bodies institutions who have not drawn the revised scales of 1970 and 1977;

(b) the reasons why they have been denied these scales?

SRI VEERAPPA MOILY (Minister for Finance and Planning).—

(a) Number cannot be accurately computed because the concerned employees are free to opt or not to opt for the relevant pay scales.

(b) The right of opting to the relevant scale has been conferred on the employees. But Law does not compel the employees to opt for the revised scales only.

ಶ್ರೀ ಕಡಿದಾಳ್ ದಿವಾಕರ್ —ಸ್ವಾಮಿ (ಆ) ಪ್ರಶ್ನೆಗೆ ಉತ್ತರವಾಗಿ ಸಂಬಂಧಪಟ್ಟ ನೌಕರರು ಮುಕ್ತವಾಗಿ ಸದರ ವೇತನ ಶ್ರೇಣಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಕೊಟ್ಟಿದ್ದೀರಾ. ಮುಕ್ತ ಎಂದರೆ ಏನು ಅನ್ನುವುದು ನನಗೆ ಅರ್ಥವಾಗುವುದಿಲ್ಲ ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮುಕ್ತ ಎಂದರ ರಿವೈಸ್ಡ್ ಪೇ ಸ್ಕೇಲನ್ನು ಸರ್ಕಾರಿ ನೌಕರರು ಬೇಕಾದರೆ ಬಿಟ್ಟು ಬಿಡಬಹುದು. ಅದನ್ನು ಅವರ ಛಾಯ್ಸಿಗೇನೇ ಬಿಟ್ಟುಬಿಟ್ಟಿದ್ದೇವೆ.

ಶ್ರೀ ಕಡಿದಾಳ್ ದಿವಾಕರ್.—ಸ್ಥಳೀಯ ಸಂಸ್ಥೆ ನೌಕರರು ರಿವೈಸ್ಡ್ ಪೇ ಸ್ಕೇಲ್ ಪ್ರಕಾರ ಆಪ್ಷ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲಾ. ಹಾಗೆನಾದರೂ ಅವರಿಗೆ ಆಪ್ಷ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡದೇ ಹೋಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಕೂಡಲೆ ಪರಿಹಾರ ಮಾಡುತ್ತೇವೆ.

SRI A. LAKSHMI SAGAR.—The answer given by you is "Number cannot be accurately computed becaus the concerned employees are free to opt or not to opt for relevant pay scales." That is not the answer. We would like to know the total number of Government employees not getting the revised pay scales. Will the Hon'ble Finance Minister give us that information ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಶೇಕಡ ೯೯ ಪಾಲು ಇದನ್ನು ಆಪ್ಷ್ ಮಾಡಿಕೊಂಡಿದ್ದಾರೆ. ಸರ್ಕಾರೀ ನೌಕರರು ಮತ್ತು ಸ್ಥಳೀಯ ಸಂಸ್ಥೆಗಳ ನೌಕರರು ಎಲ್ಲರೂ ಈ ರಿವೈಸ್ಡ್ ಪೇ ಸ್ಕೇಲ್ ಅನ್ನು ಆಪ್ಷ್ ಮಾಡಿಕೊಂಡಿದ್ದಾರೆ ಎಲ್ಲೋ ಕೆಲವರು ಇದನ್ನು ಆಪ್ಷ್ ಮಾಡಿಕೊಂಡಿಲ್ಲಾ. ಅಂದರೆ ರಿಟೈರ್ಡ್ ಆಗುವಂಥಾ ಸ್ಟೇಜ್‌ನಲ್ಲಿರುವವರು ಇದನ್ನು ಆಪ್ಷ್ ಮಾಡಿಕೊಂಡಿಲ್ಲಾ. ಕಾರಣ ಅವರಿಗೆ ಬರತಕ್ಕಂಥಾ ಪೆನ್‌ಷನ್ ವಗೈರೆ ಲೆಕ್ಕಾಚಾರ ಹಾಕಿಕೊಂಡು ಎಲ್ಲಿ ತೊಂದರೆ ಬರುತ್ತದೋ ಅಂತ ತಿಳಿದುಕೊಂಡು ಕೆಲವೇ ಅಧಿಕಾರಿಗಳು ಈ ಸ್ಕೇಲನ್ನು ಆಪ್ಷ್ ಮಾಡಿಕೊಂಡಿಲ್ಲಾ. ಡೀಟೇಲ್ಸ್ ಆಗಿ ಇದರ ಬಗ್ಗೆ ವಿವರಣೆ ಬೇಕು ಎಂದರೆ ಇದು ಸ್ವಲ್ಪ ಕಾಂಪ್ಲಿಕೇಟೆಡ್ ಮಿಚಾರ. ಹೇಗೆಂದರೆ ನಾವು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ಸ್‌ಗೆ ಬರೆದು ವಿವರಗಳನ್ನೆಲ್ಲಾ ಸಂಗ್ರಹ ಮಾಡಿ ಕರಾರು ವಾಕ್ಕಾದ ಅಂಕಿ ಅಂಶಗಳನ್ನು ತಮಗೆ ಕೊಡಬೇಕಾಗುತ್ತದೆ. ಬ್ರೇಕ್ ಅಪ್ ಫಿಗರ್ಸ್ ವಗೈರೆ ಕೊಡಬೇಕಾದರೆ ಸಂಬಂಧಪಟ್ಟ ಇಲಾಖೆಗಳಿಗೆಲ್ಲಾ ಬರೆದು ತರಿಸಬೇಕಾಗುತ್ತದೆ. ಆದರೂ ಕೂಡ ಇದನ್ನು ಸ್ಟಾರ್ಡ್ ಕೊಶ್ಚನ್ ಆಗಿ ಕೊಡುವುದಕ್ಕೆ ಕಷ್ಟವಾಗಬಹುದು. ಇದನ್ನು ಅನ್‌ಸ್ಟಾರ್ಡ್ ಕೊಶ್ಚನ್ ಆಗಿ ಕೇಳಿದರೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟಗೆಲ್ಲಾ ಬರೆದು ವಿವರಗಳನ್ನೆಲ್ಲಾ ಸಂಗ್ರಹ ಮಾಡಿ ಬ್ರೇಕ್ ಅಪ್ ಫಿಗರ್ಸ್ ವಗೈರೆ ಎಲ್ಲವನ್ನು ಕೊಡುವುದಕ್ಕೆ ಸಾಧ್ಯ, ಖಂಡಿತವಾಗಿಯೂ ವಿವರಗಳನ್ನು ತರಿಸಿ ಕೊಡುತ್ತೇನೆ.

ಶ್ರೀ ಕಡಿದಾಳ್ ದಿವಾಕರ್.—ನನ್ನ ಪ್ರಶ್ನೆ ಇಷ್ಟೆ. ಕೇವು ಮುನಿಸಿಪಾಲಿಟಿಗಳಲ್ಲಿರುವ ಚೀಫ್ ಆಫೀಸರ್ಸ್‌ಗಳು ಏನು ಇದ್ದಾರೋ ಅವರು ಈ ಪರಿಷ್ಕೃತ ವೇತನ ಶ್ರೇಣಿ ಪ್ರಕಾರ ಆಪ್ಷ್ ಮಾಡಿಕೊಳ್ಳುವುದಕ್ಕೆ ಬಿಟ್ಟಿಲ್ಲಾ ಅವರಿಗೆ ಅವಕಾಶ ಕೊಟ್ಟಿಲ್ಲಾ. ಈ ವಿಚಾರವನ್ನು ಈಗ ತುರ್ತಾಗಿ ಗಮನಕ್ಕೆ ತಂದಿದ್ದೇನೆ. ಇದನ್ನು ಈಗಲಾದರೂ ಖಂಡಿತವಾಗಿಯೂ ಸರಿಪಡಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಈಗ ತಾನೇ ಹೇಳಿರುವುದರಿಂದ ಅದನ್ನು ಖಂಡಿತವಾಗಿಯೂ ಸರಿಪಡಿಸಿ ಅದಕ್ಕೆ ಪರಿಹಾರ ಕೊಡಿಸುತ್ತೇನೆ.